ದಿನಾಂಕಃ 09.02.2026 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ

ನನ್ನ ತಂದೆ ಸಿದ್ದಪ್ಪನವರಿಗೆ ನಾವು 5 ಜನ ಮಕ್ಕಳು ಇರುತ್ತೇವೆ. ನಮ್ಮ ತಂದೆ 1994 ನೇ ಸಾಲಿನಲ್ಲಿ ಮರಣ ಹೊಂದಿದ್ದಾರೆ. ನನ್ನ ತಂದೆಯ ಮರಣದ ನಂತರ ಹಿರಿಯ ಮಗನಾದ ನಾನೇ ಕುಟುಂಬದ ಮುಖ್ಯಸ್ಥನಾಗಿ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದೆ ಎಂದರೆ ಸರಿ. ನಮ್ಮ ಮನೆಯಲ್ಲಿ ಮೊದಲಿಗೆ ಒಬ್ಬ ಈಶ್ವರಪ್ಪ ಎಂಬುವ ವ್ಯಕ್ತಿಯು ಕೆಲಸ ಮಾಡಿಕೊಂಡು ಇದ್ದರು ಎಂದರೆ ಸರಿ. ಅವರಿಗೆ ಲಿಂಗದಹಳ್ಳಿ ಕಾವಲಿನಲ್ಲಿ ಸರ್ವೆ ನಂ.2 ರಲ್ಲಿ 4 ಎಕರೆ 20 ಗುಂಟೆ ಜಮೀನು ದರಕಾಸ್ತಿನ ಅಡಿ ಮಂಜೂರು ಆಗಿತ್ತು. ಸದರಿ ಜಮೀನನ್ನು ಕೂಡ ನಾವು ಒಟ್ಟು ಕುಟುಂಬದಲ್ಲಿ ಎಲ್ಲರೂ ಸೇರಿ ವ್ಯವಸಾಯ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನನ್ನ ತಂದೆಗೆ ಸೀಲಿಂಗ್ ಲಿಮಿಟ್ಸ್‌ಗಿಂತ ಹೆಚ್ಚಿಗೆ ಜಮೀನು ಇದ್ದ ಕಾರಣ ನನ್ನ ತಂದೆಯೇ ಈಶ್ವರಪ್ಪನಿಗೆ ಜಮೀನು ಮಂಜೂರಿ ಮಾಡಿಸಿದ್ದರು ಎಂದರೆ ಸರಿಯಲ್ಲ. ಸದರಿ ಜಮೀನು ಈಗ ನನ್ನ ಹೆಸರಿನಲ್ಲಿ ಇರುತ್ತದೆ. ಸದರಿ ಜಮೀನನ್ನು ಈಶ್ವರಪ್ಪನವರು ನನ್ನ ಹೆಸರಿಗೆ ವೀಲು ನಾಮೆ ಮೂಲಕ ಕೊಟ್ಟಿದ್ದಾರೆ.

2. ಈಶ್ವರಪ್ಪ ಇವರಿಗೆ ಹೆಂಡತಿ ಮತ್ತು ಮಕ್ಕಳ ಇದ್ದರು. ಹೆಂಡತಿಯ ಹೆಸರು ಪಾರ್ವತಮ್ಮ ಮತ್ತು ಮಗಳ ಹೆಸರು ವಿಶಾಲ. ಅವರಿಬ್ಬರಲ್ಲಿ ಮಗಳು ಮಾತ್ರ ಬದುಕಿದ್ದಾಳೆ. ಅದೇ 1994 ನೇ ಸಾಲಿನಲ್ಲಿ ನಮ್ಮ ಒಟ್ಟು ಕುಟುಂಬದ ಆಸ್ತಿಗಳನ್ನು ನಾವು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯ ಹೆಸರಿಗೆ ಪಹಣಿ ಪತ್ರಿಕೆಗಳು ಹೇಗೆ ಬಂದವು ಎಂದು ನನಗೆ ಗೊತ್ತಿಲ್ಲ. ಆಸ್ತಿ ಅವರಿಗೆ ಯಾವ ರೂಪದಲ್ಲಿ ಬಂದಿದೆ ಎಂದು ನಾನು ವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**ಸಹಿ/-**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.